ಉತ್ಪಾದನೆ ಮಾಡತಕ್ಕವರಿಗೆ ಮತ್ತು ವ್ಯಾಪಾರಸ್ಥರಿಗೆ ಎಲ್ಲರಿಗೂ ಅನುಕೂಲವಾಗಿ, ಅವರೇ ಸಮಾಧಾನ ತಂದುಕೊಂಡು ನಂತರ ದೊಡ್ಡ ದೊಡ್ಡ ಚಳುವಳಿ ಏನಿತ್ತು ಅದು ನಿಂತಿತು. ಇದರ ಪರಿಣಾಮವಾಗಿ ಈ ದಿವಸ ವಿಧೇಯಕವನ್ನು ತಂದಿದ್ದೇವೆ. ಮುಖ್ಯವಾಗಿ ಈ ವಿಧೇಯಕದ 5ನೇ ವಿಧಿಯಲ್ಲಿ ಏನು ನಿಗದಿ ಮಾಡಿದೆಯೋ ಆ ರೀತಿ ತೆರಿಗೆ ಕೊಡುವುದಕ್ಕೆ ರಾಜಿ ಆಧಾರದ ಮೇಲೆ ತೆರಿಗೆ ಕೊಡಬಹುದೆಂದು ಮಾಡಿದೆ.

> ''ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರುವ ಯಾವುನೇ ವ್ಯಾಪಾರಿಯು, ಸದರಿ ಪ್ರಕರಣದ ಮೇರೆಗೆ ತೆರಿಗೆಯನ್ನು ಸಂದಾಯ ಮಾಡುವ ಬದಲು ತನ್ನ ಇಚ್ಛಾನುಸಾರವಾಗಿ ಈ ಮುಂದಿನ ದರಗಳಲ್ಲಿ ಕಾಂಪೋಸಿಷನ್ ಮೊಬಲಗನ್ನು ಸಂದಾಯ ಮಾಡುವ ಮೂಲಕ ತೆರಿಗೆಯನ್ನು ಸಂದಾಯ ಮಾಡಬಹುದು.''

ಇದರಿಂದ ಸರ್ಕಾರಕ್ಕೆ ಬರತಕ್ಕ ಆದಾಯ ಬರುತ್ತದೆ ಮತ್ತು ಜನರಿಗೆ ಕಿರುಕುಳ ತಪ್ಪುತ್ತದೆ ಎಂಬ ಎರಡು ಕಾರಣಗಳಿಂದ ಈ ಒಂದು ವಿಧೇಯಕವನ್ನು ಈ ಸಭೆಯ ಮುಂದೆ ಇಟ್ಟಿದೆ. ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸಚಿವರು ಏನು ಹೇಳುತ್ತಾರೆ ಅಷ್ಟೊಂದು ಸುಲಭವಾಗಿ ಈ ಸಮಸ್ಯೆ ಇಲ್ಲ. ನಾವು ಯಾರೂ ಈ ಪ್ರಕಾರ ರಿಯಾಯಿತಿ ಕೊಡಿ ಎಂದು ಸರ್ಕಾರಕ್ಕೆ ಒತ್ತಾಯ ಮಾಡಿಲ್ಲ. ನಮ್ಮ ಪಕ್ಷದಿಂದ ಯಾವ ಶಾಸಕರು ಈ ಕೆಲಸ ಮಾಡಿಲ್ಲ. ನನ್ನ ಪ್ರಶ್ನೆ ಏನೆಂದರೆ, ಸ್ಟೇಟ್‌ಮೆಂಟ್ ಮತ್ತು ಆಬ್‌ಜಕ್ಟ್ಸ್ ಅಂಡ್ ರೀಸನ್ಸ್ ನೋಡಿ – ಅದು ಏನು ಹೇಳುತ್ತಿದೆ ಎಂದರೆ, "the trading community went on a state-wide agitation demanding abolition of entry tax on the ground that it has casued cascading effect and has caused additional burden of the maintenance of books of accounts, As these demands were detrimental to the Government revenue, after discussion with the trading community, it was considered necessary to provide for payment of entry tax by way of compostion."

5.50 ಪಿ.ಎಂ.

ತಾವು ಹೇಳುವುದು ಏನೆಂದರೆ, ಅವರ ಡಿಮಾಂಡ್ಸ್ ಏನಿದ್ದವು ಅವು They were detrimental to the revenue. ಈ ರೀತಿ ಅವರ ಡಿಮಾಂಡ್ಸ್ ಇತ್ತು, ಅವರನ್ನು ಸಮಾಧಾನ ಮಾಡಬೇಕಾಗುತ್ತಿತ್ತೆಂದು ಎಂದು ಇದೆ. ಆದರೆ ಸ್ಟೇಟ್‌ಮೆಂಟ್‌ನಲ್ಲಿ ಏನಿದೆ ಎಂದರೆ their demand were detrimental to the interest of the State exchequer.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಪ್ರವಾಸ ತೆರಿಗೆಯನ್ನು ಪೂರ್ತಿ ತೆಗೆದುಹಾಕಬೇಕೆಂದು ಅವರು ಹೇಳುತ್ತಿದ್ದರು. ಅದನ್ನು ತೆಗೆದುಹಾಕ್ದಿದರೆ it is detrimental to the revenue of the State.

ಶ್ರೀ ಆರ್.ವಿ. ದೇಶಪಾಂಡೆ:- ಹೌದು. ಎರಡನೆಯದು, ಬುಕ್ಸ್ ಆಫ್ ಆಕೌಂಟ್ಸ್ ಮೇಂಟೇನ್ ಮಾಡುವುದಕ್ಕೆ ಕಷ್ಟವಾಗುತ್ತದೆಂದರೆ ಏಕೆ ವ್ಯಾಪಾರ ಮಾಡಬೇಕು? ಏಕೆ ದಂಧೆ ಮಾಡಬೇಕು? ರಾಜ್ಯದಲ್ಲಿ ಸ್ಟ್ರೈಕ್ ಮಾಡಿದಾಗ ಅವರ ಸಮಸ್ಯೆ ಬಗ್ಗೆ ಪರಿಶೀಲನೆ ಮಾಡಬೇಕು. ಡೆಮಾಕ್ರಸಿಯಲ್ಲಿ strike is one of the last resorts. ಮಹಾತ್ಮಾ ಗಾಂಧಿಯವರು ಈ ತತ್ವ ಒಪ್ಪಿಕೊಂಡಿದ್ದಾರೆ. ನೀವೂ ಮಾಡಬೇಕಾಗುತ್ತದೆ. ಯೋಗ್ಯ ಬೇಡಿಕೆಗಳನ್ನು ಪರಿಗಣಿಸಬೇಕು.

ಆದರೆ ಬುಕ್ಸ್ ಆಫ್ ಅಕೌಂಟ್ಸ್ ಬರೆಯುವುದಕ್ಕಾಗುವುದಿಲ್ಲ ಎಂದರೆ ಇದು ಸಮಸ್ಯೆಯೇ? ಇದು ಸಮಸ್ಯೆ ಅಲ್ಲ. ಇನ್ನು ಎರಡನೆಯದಾಗಿ, ಆ ಸಮಯದಲ್ಲಿ ಈ ಒಂದು ಸ್ಟ್ರೈಕ್ ನಡೆದಾಗ ಆಗಿನ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಮುಖ್ಯ ಕಾರ್ಯದರ್ಶಿಯವರಿಗೆ ಆ ಅಧಿಕಾರ ಕೊಟ್ಟಿದ್ದರು. ಅಲ್ಲಿ ಮಾತುಕತೆ ಏನು ಆಯಿತು? ಯಾವ ಮಾತುಕತೆ ಆಧಾರದ ಮೇಲೆ ನೀವು ಕಂಪೋಸಿಷನ್ ತಂದಿದ್ದೀರಿ? ಇದನ್ನು ಮಾಡಿದರೆ ಸರ್ಕಾರಕ್ಕೆ ಏನು ಲಾಭ? ನಾನು ಹೇಳುತ್ತೇನೆ, ಇದರಿಂದ ಸರ್ಕಾರಕ್ಕೆ ಬರುವ ರೆವಿನ್ಯೂ ಕಡಿಮೆ ಆಗುತ್ತದೆ. ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ, ಈ ಆರ್ಡಿನೆನ್ಸ್ ರೀಪ್ಲೇಸ್‌ಮೆಂಟ್ ಬಿಲ್ ಏನು ತಂದಿದ್ದೀರಿ ಇದನ್ನು ಪುನರ್ ಪರಿಶೀಲನೆ ಮಾಡಿ. ಆ ಸಮಯದಲ್ಲಿ ನಾವು ಕೇಳಿದ್ದೇವೆ. Crores of Rupees have changed hands. ಈ ಸೆಟಿಲ್‌ಮೆಂಟ್ ಆಗುವ ಸಮಯದಲ್ಲಿ. ಹೀಗಾಗಿ ಇವತ್ತು ಈ ಹರಿಬರಿಯಲ್ಲಿ ಇದನ್ನು ಪಾಸ್ ಮಾಡುವುದು ಅರ್ಥ ಇಲ್ಲ. ಇದರಿಂದ ಸರ್ಕಾರಕ್ಕೆ ಬರುವ ಆದಾಯ ಕಡಿಮೆ ಆಗುತ್ತದೆ. ಇದರಲ್ಲಿ ಸಂದೇಹ ಇಲ್ಲ. ಇದು ಕೇವಲ ಕೆಲವು ಟ್ರೇಡರ್ಸ್‌ಗೆ ಅನುಕೂಲವೇ ಹೊರತು ಸಣ್ಣ ಹಾಗೂ ಅತಿ ಸಣ್ಣ ಟ್ರೇಡರ್ಸ್‌ಗೆ ಅಲ್ಲ. ಕೇವಲ ದೊಡ್ಡ ಮ್ಯಾನುಫ್ಯಾಕ್ಚರರ್ಸ್ ಹಾಗೂ ದೊಡ್ಡ ಟ್ರೇಡರ್ಸ್‌ಗೆ ಸಹಾಯ ಮಾಡುವುದಕ್ಕೆ ಇದನ್ನು ತಂದಿದ್ದೀರಿ. ಹೀಗಾಗಿ ಇದರಿಂದ ನಾನು ಹೇಳುವ ಹಾಗೆ ಮ್ಯಾನುಫ್ಯಾಕ್ಚರ್ಸ್ ಮತ್ತು ಟ್ರೇಡರ್ಸ್‌ಗೆ ಅಷ್ಟೇ ಲಾಭ ಆಗಬಹುದು. ಆದ್ದರಿಂದ ತಾವು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ. ಅದೇ ಪ್ರಕಾರ ಕಾಂಪೋಸಿಷನ್ ಆಫ್ ಟ್ಯಾಕ್ "Notwithstanding anything contained in Section 3 but subject to the conditions laid down in this section and such other conditions and such circumstances as may be prescribed, any dealer liable to pay tax under this Act, may at his option, instead of paying tax under the said section pay such tax by way of composition at the following rates. ಇದು ಏಕೆ? ಇವರಿಗೆ ಆಪ್ಷನ್ ಏಕೆ ಕೊಡುತ್ತೀರಿ? ಏನು ಅವಶ್ಯಕ ಇತ್ತು ? ಟ್ಯಾಕ್ಸ್ ಕೊಡುವ ಪ್ರಾವಿಷನ್ ಇದ್ದಾಗ, ನೋಟಿಫೈ ಆದಾಗ ಅಲ್ಲಿ ಟ್ಯಾಕ್ಸ್ ಕೊಡಬಹುದು ಅಥವಾ ಕಾಂಪೋಸಿಷನ್ ಮಾಡಬಹುದು. ಏಕೆ? ಇವತ್ತು ಏನು ಗ್ಯಾರಂಟಿ ಇದೆ ಅವನು ಟರ್ನ್ ಓವರ್ ಜೆನ್ಯುವಿನ್ ಆಗಿ ಕೊಡುತ್ತಾನೆಂದು ಗ್ಯಾರಂಟಿ ಏನಿದೆ? ಎಂಟ್ರಿ ಟ್ಯಾಕ್ಸ್ ಬರುವುದು as soon as the goods enter, they will attract the Entry Tax. ಇವತ್ತು ಇಲ್ಲಿ ಏನಾಗಬಹುದು? ಕಾಂಪೋಸಿಷನ್ ವಿಚಾರದಲ್ಲಿಯಾದರೆ ತಕ್ಷಣ ಗೌರ್ನಮೆಂಟ್ ಟ್ರೆಷರಿಗೆ ಹಣ ಬರುವುದಿಲ್ಲ. The treaders and the manufacturers keep the tax money in their pockets for a long time. ಹೀಗಾಗಿ ಈ ಒಂದು ವಿಧೇಯಕ ಪುನರ್ ಪರಿಶೀಲನೆಯಾಗಬೇಕಾಗುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ. ಈ ಬಿಲ್ಲನ್ನು ವಿತ್‌ಡ್ರಾ ಮಾಡಿ ರಾಜ್ಯದ ಹಿತದೃಷ್ಟಿಯಿಂದ ಯೋಗ್ಯವಾದುದನ್ನು ಮಾಡಿ. ಇದು ಸರಿಯಲ್ಲ ಎಂದು ನನ್ನ ಅಭಿಪ್ರಾಯ.

† ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ವಿರೋಧಪಕ್ಷದ ನಾಯಕರು ಈ ವಿಧೇಯಕದ ವಿಷಯದ ಮೇಲೆ ಮಾತನಾಡುವಾಗ ಎರಡು ಮಾತುಗಳನ್ನು ಹೇಳಿದರು. ಇದು ಒಂದು ಕೇವಲ ಕೈಗಾರಿಕೋದ್ಯಮಿಗಳಿಗೆ ಮತ್ತು ವ್ಯಾಪಾರಸ್ಥರಿಗೆ ಲಾಭವಾಗುತ್ತದೆ, ಇದರಿಂದ ಸರ್ಕಾರಕ್ಕೆ ಲಾಭ ಬರುತ್ತಿಲ್ಲವೆಂದರು. ಇದು ನಿಜ. ಈ ರಾಜ್ಯಾದ್ಯಂತ ಒಂದು ಪ್ರಚಂಡವಾದಂತಹ ಹೋರಾಟವನ್ನು ಕೈಗಾರಿಕೋದ್ಯಮಿಗಳು ಮತ್ತು ವ್ಯಾಪಾರಸ್ಥರು ಪ್ರತಿಯೊಂದು ಹಂತದಲ್ಲಿ ಮಾಡಿದರು. ಸಣ್ಣಪುಟ್ಟ ಚಿಲ್ಲರೆ ಅಂಗಡಿಗಳವರೂ ಸಹ ಹೋರಾಟವನ್ನು ಮಾಡಿದರು. ತೀವ್ರವಾದ ಹೋರಾಟವನ್ನು ಮಾಡಿದ ಮೇಲೆ ಅಂದಿನ ಮುಖ್ಯಮಂತ್ರಿಗಳು ವ್ಯಾಪಾರಸ್ಥರ ಪ್ರತಿನಿಧಿಗಳನ್ನು ಬರಮಾಡಿಕೊಂಡು ಇದನ್ನು ಯಾವುದಾದರೂ ರೀತಿಯಲ್ಲಿ ಸೆಟಲ್ ಮಾಡಬೇಕೆಂದು ಪ್ರಯತ್ನ ಮಾಡಿದರು. ಅಂದಿನ ಮುಖ್ಯ

5 ಪರ್ಸೆಂಟಿತನಕ ಏರಿಸಬಹುದೆಂದು ತಿಳಿದುಕೊಂಡು ಮಾಡಿದರು. ಮುಂದೆ, ವ್ಯಾಪಾರಸ್ಥರೂ ಕೂಡ ಒಂದು ಸಂಧಾನದ ಮೂಲಕ ತೀರ್ಮಾನಿಸಲಾಗಿದೆ ಎಂದು ಸ್ಟೇಟ್‌ಮೆಂಟ್ ಆಫ್ ಅಬ್ಜಕ್ಷನ್‌ನಲ್ಲಿ ಹೇಳುತ್ತಿದ್ದಾರೆ. ನಿಜವಾಗಿಯೂ ಮಾಡಿಕೊಂಡಂಥದ್ದು ಸರಿಯೇ, ಸರಿಯಾದದ್ದು ಇಲ್ಲವೇ, ಆದರಲ್ಲಿ ಬಹಳ ನ್ಯೂನತೆಗಳು ಇವೆ, ಆದಕಾರಣ ಅದರ ಬಗ್ಗೆ ವಿಚಾರ ಮಾಡಬೇಕು. ನಾನು ಮೊದಲನೆಯದಾಗಿ ಕೇಳುತ್ತಿದ್ದೇನೆಂದರೆ ಇದರಿಂದ ಇವತ್ತಿನ ದಿವಸ 213 ಕೋಟಿ ರೂಪಾಯಿಗಳು, ಆದಾಯ ಬರುತ್ತದೆ ಎಂದು ಎಸ್ಟಿಮೇಟ್ ಮಾಡಿದ್ದಾರೆ. ಆ ಎಸ್ಟಿಮೇಟ್ ಪ್ರಕಾರ ಇವತ್ತಿನವರೆಗೂ ಎಷ್ಟು ರೂಪಾಯಿ ಬಂದಿದೆ ಎಂಬುದನ್ನು ತಾವು ತಿಳಿಸಿಕೊಡಬೇಕು. 213 ಕೋಟಿ ರೂಪಾಯಿ ಬರುತ್ತವೆಂದು ನೀವು ಎಸ್ಟಿಮೇಟ್ ಮಾಡಿದ್ದೀರಿ. ಆ ಎಸ್ಟಿಮೇಟ್‌ನಲ್ಲಿ, ಇವತ್ತಿನವರೆಗೂ ಎಷ್ಟು ರೂಪಾಯಿ ಬಂದಿದೆ, ಹೋದವರ್ಷ ಎಷ್ಟು ಬಂದಿತ್ತು ಎಂಬುದನ್ನು ತಾವು ತಿಳಿಸಿದರೆ, ಅದರ ಉದ್ದೇಶ ಗೊತ್ತಾಗುತ್ತದೆ. ಇದರಲ್ಲಿ ಎಷ್ಟೊಂದು ಲೂಪೋಲ್ ಇದೆ ಎಂದು. ಮತ್ತೆ ಎರಡನೆಯದು, ಈಗಾಗಲೇ ಸೇಲ್ಸ್ ಟ್ಯಾಕ್ಸ್ ಮತ್ತು ಎಂಟ್ರಿ ಟ್ಯಾಕ್ಸ್ ಎರಡನ್ನೂ ಹಾಕಿದ್ದೀರಿ. ಇವತ್ತಿನ ದಿವಸ 103 ಐಟಂಗಳ ಮೇಲೆ ಸೇಲ್ಸ್ ಮತ್ತು ಎಂಟ್ರಿ ಟ್ಯಾಕ್ಸ್ ಇದು ಡಬಲ್ ಟ್ಯಾಕ್ಸ್ ಆಗುತ್ತದೆ. ಆದುದರಿಂದ ಕೆಲವರು ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದರ ಸಲುವಾಗಿ, ಒಂದೇ ಒಂದು ಟ್ಯಾಕ್ಸ್ ಸರ್‌ಚಾರ್ಜ್ ಎಂದು ಇಟ್ಟರೆ, ಟ್ಯಾಕ್ಸ್ ಬಿಟ್ಟರೆ ಯಾವುದೇ ರೀತಿಯಿಂದ ಇವತ್ತು ಆಗುವುದಿಲ್ಲ. ಯಾವ ಪ್ರಕಾರವಾಗಿ ಇನ್‌ಕಮ್ ಟ್ಯಾಕ್ಸ್‌ನಲ್ಲಿ ಒಂದೇ ಒಂದು ಟ್ಯಾಕ್ಸ್ ಇದೆಯೋ ಆ ಪ್ರಕಾರ ತಾವು ಇವತ್ತಿನದಿವಸ ಇಲ್ಲಿಯೂ ಸಹಿತ ಒಂದೇಒಂದು ಟ್ಯಾಕ್ಸ್ ಇಟ್ಟಲ್ಲಿ ಯಾವಾಗಲೂ ತಪ್ಪಿಸುವುದಿಲ್ಲ, ಯಾವಾಗ ಟ್ಯಾಕ್ಸ್ ಯಾವ ರೀತಿ ಆಗುತ್ತದೆ ಹಾಗೆ ಇವೇಷನ್ ಹೆಚ್ಚಾಗುತ್ತದೆ. ಟ್ಯಾಕ್ಸ್ ಕಡಿಮೆ ಇತ್ತೆಂದರೆ, ಇವೇಷನ್ ಕಡಿಮೆ ಇರುತ್ತದೆ. ಆದರೆ ಇವತ್ತಿನದಿವಸ ನೀವು ಇಲ್ಲಿ ಟ್ಯಾಕ್ಸ್ ಹೆಚ್ಚು ಮಾಡುವುದಕ್ಕೆ ಹೊರಟಿದ್ದೀರಿ. ಆದರೆ, ಕೆಲವು ಐಟಂಗಳ ಮೇಲೆ ತಾವು ತೆಗೆದಿದ್ದೀರಿ. ಯಾವ ಪ್ರಕಾರ ಗೋಧಿ ಮೇಲೆ, ಟ್ರಾನ್ಸ್‌ಪೋರ್ಟೇಷನ್ ಮೇಲೆ, ಗೋಧಿ ಮೇಲೆ ಏಕೆ ತೆಗೆದಿರಿ. ಎರಡು ಪರ್ಸೆಂಟ್ ಇತ್ತು ಆದಕ್ಕೆ ಕಾರಣ ಏನಿತ್ತು. ಹೀಗಾಗಿ 103 ಐಟಂನೊಳಗೆ, ಯಾವ ಯಾವ ಮುಖ್ಯ ಐಟಂ ಇದ್ದವು ಅಲ್ಲಿ ತೆಗೆದಿದ್ದೀರಿ. ಯಾವ ಬೇಡ ಐಟಂ ಇವೆ, ಜೋಳ ಐಟಂ ಇವೆ, ಅವಕ್ಕೆ ಇಟ್ಟಿದ್ದೀರಿ. ಆದಕಾರಣ ಮುಖ್ಯವಾಗಿ, ಮಂಡಲ್ ಪಂಚಾಯಿತಿಗೆ ರೊಕ್ಕ ಕೊಡಬೇಕೆಂದು ಮಾಡಿದ್ದೀರಿ. ಅನಂತರ ಮುನಿಸಿಪಾಲಿಟಿಗೆ ಕೊಡಬೇಕೆಂದು ಮಾಡಿದ್ದೀರಿ. ಮುನಿಸಿಪಾಲಿಟಿಗೆ ನಾವು ಕೊಡತಕ್ಕ ರೊಕ್ಕ ಎಷ್ಟು, 80 ಕೋಟಿ ರೂಪಾಯಿ 80 ಕೋಟಿ ರೂಪಾಯಿಗಳನ್ನು ಕೊಡುವಾಗ, ಇವತ್ತಿನದಿವಸ ನೀವು ಏನು ಮಾಡಿದ್ದೀರಿ? ನಾನು ಮೊದಲೇ ಹೇಳಿದಹಾಗೆ, ಇವತ್ತಿನವರೆಗೆ 213 ಕೋಟಿ ಬರುತ್ತದೆಂದು ತಾವು ಮಾಡಿದ್ದೀರಿ. ಎಷ್ಟು ಬಂದಿದೆ ಎಂಬುದನ್ನು ತಿಳಿಸಬೇಕು. ಎರಡನೆಯದಾಗಿ ಹೋದವರ್ಷ ಎಷ್ಟು ವಸೂಲಾಗಿದೆ ಎಂಬುದನ್ನೂ ತಿಳಿಸಬೇಕು ಅನಂತರ, ಇದರಿಂದ ವ್ಯಾಪಾರಸ್ಥರಿಗೆ ಅನುಕೂಲವಾಗುವುದಿಲ್ಲ. 70 ಸಾವಿರತನಕ ಏನು composition ಇದೆಯೆಂದು ಹೇಳುತ್ತೀರಿ ಇದರಿಂದ ಕರಪ್‌ಷನ್ ಜಾಸ್ತಿಯಾಗುತ್ತದೆ. ಆದಕಾರಣ ಒಂದೇಒಂದು ಟ್ಯಾಕ್ಸ್ ಇತ್ತೆಂದರೆ, ಅದು ಸರಳ ವಿಧಾನವಾಗುತ್ತದೆಂದು ಹೇಳಿ, ಇದನ್ನು ವಿರೋಧಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ಒಂದು ಮಾತು ಮಾನ್ಯ ವಿರೋಧಪಕ್ಷದ ನಾಯಕರಿಗೆ ಮತ್ತು ಈ ಸಭೆಯ ಸದಸ್ಯರಿಗೆ ಸರ್ಕಾರದ ಪರವಾಗಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಯಾವುದೇ ವಿಧೇಯಕದಲ್ಲಿ, ಸರ್ಕಾರಕ್ಕೆ ಬರುವ ಆದಾಯ ಕಡಿಮೆಯಾಯಿತು ಎಂದು ನಮಗೇನಾದರೂ ಮನವರಿಕೆಯಾದರೆ, ಅದನ್ನು ತುಂಬಿಕೊಳ್ಳುವುದಕ್ಕೆ ಕಾನೂನನ್ನು ತಿದ್ದುಪಡಿ ಮಾಡಿ, ಸರ್ಕಾರಕ್ಕೆ ಬರಬೇಕಾದ ತೆರಿಗೆಗಳನ್ನು ಯಾವುದೇ ರೀತಿಯಲ್ಲಿ ಕಡಿಮೆ ಮಾಡದೇ ಮಾಡುವುದಕ್ಕೆ ಸರ್ಕಾರ ಸದಾ ಸಿದ್ಧವಿದೆ. ಈ ವಿಧೇಯಕದಲ್ಲಿ ಮುಖ್ಯವಾದ ಅಂಶ

ಏನೆಂದರೆ, ವ್ಯಾಪಾರ ಮಾಡತಕ್ಕ ವರ್ತಕನು ಎರಡು ತರಹ ಲೆಕ್ಕ ಇಡಬೇಕಾಗುತ್ತದೆ. ಒಂದು ಟರ್ನ್ ಓವರ್ ಎಷ್ಟಾಯಿತು ಎಂಬುದಕ್ಕೆ, ಲೆಕ್ಕ ಮತ್ತು ಮಾರಾಟ ಎಷ್ಟಾಯಿತು ಎಂದು ಒಂದು ಲೆಕ್ಕ. ಈ ವಿಧೇಯಕ ಮುಖಾಂತರ ಏನು ಮಾಡಿದರು, ಮಾರಾಟ ಏನಾಗಿದೆ, ಎಷ್ಟು ಮಾಲು ಬರುತ್ತದೆಯೋ ಅದರ ಮೇಲೆ ತಾನೆ ಮಾರಾಟ ಮಾಡುವುದು. ಮಾರಾಟದ ಮೇಲೆ ಹೇಗಿದ್ದರೂ, ಸೇಲ್ಸ್ ಟ್ಯಾಕ್ಸ್ ಕೊಡುವುದಕ್ಕೆ ಲೆಕ್ಕವನ್ನು ಇಟ್ಟೇ ಇಡುತ್ತಾನೆ. ಆ ಆಧಾರದ ಮೇಲೆ, ಈ 3ನೇ ವಿಧಿಯಲ್ಲಿ, ಅಸಲು ಕಾನೂನಿನ 3ನೇ ವಿಧಿಯಲ್ಲಿ, ಏನು 2 ಪರ್ಸೆಂಟ್ ಕೊಡಬೇಕೆಂದು ಮಾಡಿದೆಯೋ, ಅದರಂತೆ ಎಂಟ್ರಿ ಟ್ಯಾಕ್ಸ್‌ನಲ್ಲೂ ಕೊಟ್ಟರೆ ಸಾಕಾಗುತ್ತದೆ ಎಂದು ಮಾಡಿದೆ. ಅದರಿಂದ, ಇದರಲ್ಲಿ ಕಡಿಮೆಯಾಗುತ್ತದೆ ಎನ್ನುವ ಭಯಕ್ಕೆ ಕಾರಣ ಇಲ್ಲ. ಕಡಿಮೆ ಆಗುತ್ತದೆ ಎಂಬ ಭಯ ನಮಗೆ ಏನಾದರೂ ಗೊತ್ತಾದರೆ, ಅದಕ್ಕೆ ಸೂಕ್ತ ತಿದ್ದುಪಡಿಯನ್ನು ಸರ್ಕಾರ ಮಾಡುವುದಕ್ಕೆ ಸಿದ್ಧ ಇದೆ. ಹಿಂದೆ ಎಂಟ್ರಿ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ ನಂ.1, ಆದು ಚರ್ಚೆಯಾದಾಗ ಮಾನ್ಯ ಮುಖ್ಯಮಂತ್ರಿಗಳು ಇದೇ ಸಭೆಯಲ್ಲಿ ಹೇಳಿದ್ದಾರೆ. ಸರ್ಕಾರ ಯಾವಾಗಲೂ we will keep an open mind on this subject. ಇದರಿಂದ ಏನಾದರೂ ತೊಡಕು ತೊಂದರೆಯಾದರೆ, ಅದನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಸಿದ್ಧವಾಗಿದ್ದೇವೆಂದು ಅರಿಕೆ ಮಾಡಿದ್ದಾರೆ. ಆದ್ದರಿಂದ, ಮಾನ್ಯ ಸದಸ್ಯರು ಈ ವಿಧೇಯಕವನ್ನು ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ:– ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಇಲ್ಲಿಯವರೆಗೆ ಎಷ್ಟು ಇನ್‌ಕಮ್ ಬಂತು.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಈ ಅಧ್ಯಾದೇಶ ಬಂದಮೇಲೆ ಇಲ್ಲಿಯವರೆಗೆ ಏನಾಗಿದೆ ಎಂದು ಅಂಕಿ ಸಂಖ್ಯೆ ಕೇಳಿದ್ದೀರಿ. Entry tax collected as on December 1992, Rs.72 crores as against budget estimate of 213 crores... ಇನ್ನೊಂದು ಮಾತು ತಾವು ಹೇಳಿದಿರಿ, ಮುನಿಸಿಪಾಲಿಟಿಗಳಿಗೆ 80 ಕೋಟಿ ಸಾಕು ಎಂದು ತಾವು ಮಾತನಾಡಿದಿರಿ.

ಶ್ರೀ ಶಿವಾನಂದ ಎಚ್. ಕೌಜಲಗಿ:– ಈಗ ನಾನು ಕೇಳುವುದು ಎಂದರೆ 213 ಕೋಟಿ ಎಸ್ಟಿಮೇಟ್ ಮಾಡಿರುತ್ತೀರಿ, 9 ತಿಂಗಳಲ್ಲಿ ತಮಗೆ 73 ಕೋಟಿ ಬಂದಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಇವುಗಳನ್ನು ಸೇರಿಸಿ 6 ತಿಂಗಳೂ ಆಗಿಲ್ಲ.

Sri Shivananda H. Koujalagi:- You have estimated 213 crores...

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ತಮಗೆ ಇನ್ನೊಂದು ಹೇಳುವುದಾದರೆ 103 ಕಮಾಡಿಟೀಸ್ ಸೇರಿಸಿ ಇನ್ನೂ ಸ್ವಲ್ಪ ದಿವಸ ಆಯಿತು.

ಶ್ರೀ ಆರ್.ವಿ. ದೇಶಪಾಂಡೆ:– ತಾವು ಆಂಟಿಸಿಪೇಟ್ ಮಾಡಿದ್ದುದು 213 ಕೋಟಿ ಇದನ್ನು ತಂದು 5 ತಿಂಗಳಾಯಿತು ಎಂದು ಹೇಳುತ್ತಿದ್ದೀರಿ. ಅದಕ್ಕಿಂತ ಮಹತ್ವದ ಪ್ರಶ್ನೆ ಎಂದರೆ ಟ್ಯಾಕ್ಸಸ್ ಕಲೆಕ್ಟ್ ಮಾಡುವುದು, ಒಂದು, ಟ್ಯಾಕ್ಸ್ ಹಾಕಿ ಕಂಪೋಸಿಷನ್ ಮಾಡುವುದು ಒಂದು. Composition is not a healthy practice in taxation... ಪೆನಾಲ್ಟಿ ಹಾಕುವ ಸಮಯದಲ್ಲಿ ಯಾರೂ ಸರಿಯಾಗಿ ಇದಕ್ಕೆ ಲೆಕ್ಕ ಇರುವುದಿಲ್ಲ. ಆ ಸಮಯದಲ್ಲಿ ಕಂಪೋಸಿಷನ್ ಬರುತ್ತದೆ. It is a healthy practice. You tell me, If you say that 'yes' - today taxation as a composition is also a very healthy sign. I don't think it is a very healthy sign.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಸದಸ್ಯರಿಗೆ ಅರಿಕೆ ಮಾಡುವುದು ಏನೆಂದರೆ, ಕಂಪೊಸಿಷನ್ ಶಬ್ದ ಉಪಯೋಗಿಸಿದ್ದೇವೆ. ಏತಕ್ಕೆಂದರೆ ಪ್ರತ್ಯೇಕವಾಗಿ ಇನ್ನೊಂದು ಲೆಕ್ಕ